ಶ್ರೀ ಜೆ.ಸಿ. ಮಾಧುಸ್ವಾಮಿ :— ಮಾನ್ಯ ಉಪಾಧ್ಯಕ್ಷರೇ, ನಿಲುವಳಿ ಸೂಚನೆ ನಿಯಮ 60ರ ಪ್ರಕಾರ ನಾನು ಕಳುಹಿಸಿದ್ದೇನೆ. ಪ್ರಶ್ನೋತ್ತರ ಆದತಕ್ಷಣ ಮಾತನಾಡುವುದಕ್ಕೆ ಅವಕಾಶ ನಾನು ಕೇಳುತ್ತಿದ್ದೇನೆ.

ಉಪಾಧ್ಯಕ್ಷರು :— ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

(ಅ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) :— ಮಾನ್ಯ ಉಪಾಧ್ಯಕ್ಷರೇ, 13ನೇ ಪಟ್ಟಿಯಲ್ಲಿರುವ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪೈಕಿ 40 ಪ್ರಶ್ನೆಗಳಿಗೆ ಉತ್ತರವನ್ನು ಸದನದಲ್ಲಿ ಮಂಡಿಸುತ್ತೇನೆ.

ಬಗರ್ ಹುಕಂ ಮಂಜೂರಾತಿ ತಿದ್ದುಪಡಿ.

873(1324) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬಗರ್ ಹುಕುಂ ಮಂಜೂರಾತಿಗಾಗಿ ಇತ್ತೀಚಿನ ತಿದ್ದುಪಡಿಯಂತೆ ಫಾರಂ 53ರಲ್ಲಿ ಇದುವರೆಗೆ ರಾಜ್ಯಾದ್ಯಂತ ಬಂದ ಅರ್ಜಿಗಳ ಒಟ್ಟು ಸಂಖ್ಯೆ ಎಷ್ಟು? (ತಾಲ್ಲೂಕುವಾರು ವಿವರ ನೀಡುವುದು)

ಆ) ಈ ಅರ್ಜಿಗಳ ಪರಿಶೀಲನೆಯನ್ನು ಯಾವಾಗಿನಿಂದ ಆರಂಭಿಸಲಾಗುವುದು;

ಇ) ಬಂದಿರುವ ಅರ್ಜಿಗಳ ಬಗ್ಗೆ ಪರಿಶೀಲನೆ ಜಿಲ್ಲಾಧಿಕಾರಿಯವರಿಗೆ ಕೊಟ್ಟಿರುವುದರಿಂದ ಜಿಲ್ಲಾಧಿಕಾರಿಗಳ ಇತರೆ ಹೊಣೆಗಾರಿಕೆಗಳೊಂದಿಗೆ ಈ ಅರ್ಜಿಗಳ ಪರಿಶೀಲನೆ ಕಷ್ಟ ಸಾಧ್ಯ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಈ) ಹಾಗಿದ್ದಲ್ಲಿ ಜಿಲ್ಲಾಧಿಕಾರಿ ಬದಲಿಗೆ ಅರ್ಜಿಗಳ ಪರಿಶೀಲನೆಗಾಗಿ ಈಗಿರುವ ಸಮಿತಿಗೆ ವಹಿಸಿಕೊಡುವ ಬಗ್ಗೆ ಸರ್ಕಾರ ಪರಿಶೀಲಿಸುವುದೆ?

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) :—

ಅ)ಬಗರ್ ಹುಕುಂ ಸಾಗುವಳಿ ಜಮೀನನ್ನು ಸಕ್ರಮೀಕರಣಗೊಳಿಸಲು ನಮೂನೆ 53ರಲ್ಲಿ ಅರ್ಜಿ ಸಲ್ಲಿಸುವುದಕ್ಕಾಗಿ ದಿನಾಂಕ : 30-4-1999ರ ವರೆಗೆ ಕಾಲಾವಕಾಶವನ್ನು ನೀಡಲಾಗಿದೆ. ಈ ಅವಧಿ ಮುಗಿದ ನಂತರ ಒಟ್ಟು ಅರ್ಜಿಗಳ ಸಂಖ್ಯೆ ಎಷ್ಟು ಎಂಬುದು ತಿಳಿದು ಬರುತ್ತದೆ.

ಆ) ದಿನಾಂಕ 1-5-99ರಿಂದ.

ಇ) ಇಲ್ಲ.

ಈ) ಅಧಿಕಾರಿಗಳು ಸಲ್ಲಿಸುವ ಶಿಫಾರಸ್ಸುಗಳನ್ನು ಪರಿಗಣಿಸಿ ಅರ್ಜಿಗಳನ್ನು ವಿಲೆ ಮಾಡುವ ಅಧಿಕಾರವನ್ನು ಸಮಿತಿಗಳಿಗೆ ನೀಡಲಾಗಿದೆ.

ವಿರಾಜಪೇಟೆ ತಾಲ್ಲೂಕಿನಲ್ಲಿ ಕೆ.ಎಸ್.ಆರ್.ಟಿ.ಸಿ. ಬಸ್ ಮಾರ್ಗಗಳನ್ನು ಕಡಿತಗೊಳಿಸಿರುವುದು.

874(1331) ಶ್ರೀ ಹೆಚ್.ಡಿ. ಬಸವರಾಜ್ (ವಿರಾಜಪೇಟೆ) :— ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ವಿರಾಜಪೇಟೆ ತಾಲ್ಲೂಕಿನಲ್ಲಿ ಹಿಂದೆ ಇದ್ದ ಸುಮಾರು 22 ಕೆಎಸ್ಆರ್‌ಟಿಸಿ ಬಸ್ ಮಾರ್ಗಗಳನ್ನು ಕಡಿತಗೊಳಿಸಿ ಕೇವಲ 14 ಮಾರ್ಗಗಳಲ್ಲಿ ಮಾತ್ರ ಕೆಎಸ್ಆರ್‌ಟಿಸಿ ಬಸ್ ಸಂಚರಿಸುವ ವ್ಯವಸ್ಥೆ ಮಾಡಿರುವುದರಿಂದ ಇಲ್ಲಿನ ನಾಗರೀಕರಿಗೆ ತೀರಾ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದರೆ ಸರ್ಕಾರ ಹಿಂದಿನಂತಿದ್ದ ಎಲ್ಲಾ ಮಾರ್ಗಗಳಲ್ಲಿ ಕೆಎಸ್ಆರ್‌ಟಿಸಿ ಬಸ್ ಸಂಚರಿಸುವಂತೆ ಮಾಡಲು ಯಾವಾಗ ಕ್ರಮ ಕೈಗೊಳ್ಳಲಾಗುವುದು.

ಆ) ವಿರಾಜಪೇಟೆ ತಾಲ್ಲೂಕು ಕೇರಳ ಗಡಿಪ್ರದೇಶದಲ್ಲಿರುವುದರಿಂದ ಸಾರಿಗೆ ವ್ಯವಸ್ಥೆ ಸುಧಾರಣೆಗಾಗಿ ಮಿನಿ ಸಾರಿಗೆ ಡಿಪೋ ವಿರಾಜಪೇಟೆಯಲ್ಲಿ ತೆರೆಯುವುದು ಅವಶ್ಯಕವಲ್ಲವೇ?

ಶ್ರೀ ಬಿ.ಎನ್. ಬಚ್ಚೇಗೌಡ (ಸಾರಿಗೆ ಸಚಿವರು) :—

ಅ) ವಿರಾಜಪೇಟೆ ತಾಲ್ಲೂಕಿನಲ್ಲಿ ಈಗ ಒಟ್ಟು 27 ಮಾರ್ಗಗಳಲ್ಲಿ ಸಾರಿಗೆ ಸಂಸ್ಥೆಯ ಮತಿಯಿಂದ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗಿದೆ. ಈ ಕೆಳಗಿನ ಮಾರ್ಗಗಳನ್ನು ಹೊರತುಪಡಿಸಿ ಸಂಸ್ಥೆಯು ವಿರಾಜಪೇಟೆ ತಾಲ್ಲೂಕಿನಲ್ಲಿ ಯಾವುದೇ ಮಾರ್ಗವನ್ನು ರದ್ದುಪಡಿಸಿರುವುದಿಲ್ಲ.

1) ಸಕಲೇಶಪುರ-ಕಣ್ಣಾನೂರು
2) ಮಡಿಕೇರಿ-ನಾಗರಹೊಳೆ
3) ಮಡಿಕೇರಿ-ಬೆಂಗಳೂರು

ಸದರಿ ಮಾರ್ಗಗಳ ಆದಾಯವು ತುಂಬಾ ನಿರಾಶಾದಾಯಕವಾಗಿರುವುದರಿಂದ ಅವುಗಳನ್ನು ಪುನರಾರಂಭಿಸುವುದು ಸಮಂಜಸವೆನಿಸುವುದಿಲ್ಲ.

ಆ) ಇಲ್ಲ.